ಅಧ್ಯಾಯ–III

ಟಿಜಿಎಸ್ ಮಾಡ್ಯೂಲ್ ನ ಅಡಿಯಲ್ಲಿ ಗ್ರಾಮ ಪಂಚಾಯಿತಿಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳ ಲೆಕ್ಕಪರಿಶೋಧನೆಯ ಫಲಿತಾಂಶಗಳು

ಅಧ್ಯಾಯ-III

ಟಿಜಿಎಸ್ ಮಾಡ್ಯೂಲ್‌ನ ಅಡಿಯಲ್ಲಿ ಗ್ರಾಮ ಪಂಚಾಯಿತಿಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳ ಲೆಕ್ಕಪರಿಶೋಧನೆಯ ಫಲಿತಾಂಶಗಳು

3.1 ಪರಿಚಯ

ರಾಜ್ಯ ಸರ್ಕಾರವು ಸಿಎಜಿಯ ಡಿಪಿಸಿ ಕಾಯ್ದೆ, 1971ರ ಪರಿಚ್ಛೇಧ 20(1)ರ ಅಡಿಯಲ್ಲಿ ಜಿಲ್ಲಾ ಪಂಚಾಯಿತಿಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಟಿಜಿಎಸ್ ಅಧ್ಯಾದೇಶವನ್ನು ಸಿಎಜಿರವರಿಗೆ ವಹಿಸಿತು. ಜಿಲ್ಲಾ ಪಂಚಾಯಿತಿಗಳಿಗೆ 2010-11 ರಿಂದ 2014-15 ಗೆ ಐದು ವರ್ಷಗಳ ಅವಧಿಗೆ ಅಧ್ಯಾದೇಶವನ್ನು ನೀಡಲಾಗಿತ್ತು ಮತ್ತು ಪ್ರತಿ ಐದು ವರ್ಷಗಳಿಗೊಮ್ಮೆ ಅದರ ಮಾನ್ಯತೆಯನ್ನು ವಿಸ್ತರಿಸಲಾಗುತ್ತಿದ್ದು, ಪ್ರಸ್ತುತ 2024-25 ವರೆಗೆ ಮುಂದುವರೆಸಲಾಗಿದೆ.

ಪ್ರಮಾಣಿತ ಷರತ್ತುಗಳ ಪ್ರಕಾರ ಗ್ರಾಮ ಪಂಚಾಯಿತಿಗಳು/ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಸಾರ್ವಜನಿಕ ಹಣಕಾಸು ನಿರ್ವಹಣೆ ಮತ್ತು ಹೊಣೆಗಾರಿಕೆಯನ್ನು ಬಲಪಡಿಸಲು ಸಿಎಜಿಯು, ಗ್ರಾಮ ಪಂಚಾಯಿತಿಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳ ಪ್ರಾಥಮಿಕ ಶಾಸನಬದ್ಧ ಲೆಕ್ಕಪರಿಶೋಧಕರಿಗೆ, ಅಂದರೆ ಕೆಎಸ್ಎಎಡಿಯ ಪ್ರಧಾನ ನಿರ್ದೇಶಕರಿಗೆ, ಸೂಕ್ತವಾದ ಟಿಜಿಎಸ್ ಒದಗಿಸಬೇಕು. ಸಿಎಜಿ ಡಿ.ಪಿ.ಸಿ ಕಾಯಿದೆಯ ಪರಿಚ್ಛೇಧ 23ರ ಅಡಿಯಲ್ಲಿ ಹೊರಡಿಸಲಾದ ಲೆಕ್ಕಪರಿಶೋಧನಾ ನಿಬಂಧನೆಗಳು 2020ರ ಪರಿಚ್ಛೇಧ 120 ರಿಂದ 122ರಲ್ಲಿ ಟಿಜಿಎಸ್ ಬೆಂಬಲವನ್ನು ವಿಸ್ತರಿಸಬೇಕಾದ ಕ್ಷೇತ್ರಗಳನ್ನು ವಿವರಿಸಲಾಗಿದೆ. ಇದರಲ್ಲಿ, ಯೋಜನೆ, ಕಾರ್ಯವಿಧಿ/ವಿಧಾನ, ಪ್ರಾಥಮಿಕ ಶಾಸನಬದ್ಧ ಲೆಕ್ಕಪರಿಶೋಧಕರು ಅನುಸರಿಸುತ್ತಿರುವ ಅಸ್ತಿತ್ವದಲ್ಲಿರುವ ಪದ್ಧತಿಗಳ ಸುಧಾರಣೆಗಳ ಕುರಿತು ಸಲಹೆ, ಆಂತರಿಕ ನಿಯಂತ್ರಣ ಮತ್ತು ತರಬೇತಿ ಮತ್ತು ಸಾಮರ್ಥ್ಯ ನಿರ್ಮಾಣದ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಲು ಸಹಾಯ ಇವುಗಳನ್ನು ಒಳಗೊಂಡಿದೆ. ಈ ನಿಯತಾಂಕಗಳ ಬಗ್ಗೆ ಮಾಹಿತಿಯನ್ನು ಕೆಳಗೆ ಚರ್ಚಿಸಿದಂತೆ ಪ್ರಾಥಮಿಕ ಲೆಕ್ಕಪರಿಶೋಧಕರು ಸಲ್ಲಿಸಬೇಕಾದ ನಿರ್ದಿಷ್ಟ ಸಲ್ಲಿಕೆ/ವರದಿಗಳ ಮೂಲಕ ಪಡೆಯಲಾಗುತ್ತದೆ.

3.2 ಲೆಕ್ಕಪರಿಶೋಧನೆಯ ಯೋಜನೆ

ಪ್ರಮುಖ ಅಂಶಗಳ ಮೇಲೆ ಗಮನ ಕೇಂದ್ರೀಕರಿಸುವ, ಹಾಗೂ ಲಭ್ಯವಿರುವ ಮಾನವ ಸಂಪನ್ಮೂಲಗಳನ್ನು ಆದ್ಯತೀಕರಿಸುವ ಅಗತ್ಯತೆಯ ದೃಷ್ಟಿಯಿಂದ ಲೆಕ್ಕಪರಿಶೋಧನೆಯ ಯೋಜನೆ ಮಾಡುವುದು ಅತ್ಯಗತ್ಯ ಈ ಯೋಜನೆಯು, ಪೂರ್ವನಿಗದಿತ ಮಾನದಂಡಗಳ ಆಧಾರದ ಮೇಲೆ, ಲೆಕ್ಕಪರಿಶೋಧನಾ ಘಟಕಗಳ ಹಾನಿ ಸಂಭವನೀಯ ವಿಶ್ಲೇಷಣೆಯನ್ನು ಒಳಗೊಂಡಿರುತ್ತದೆ. ಗ್ರಾಮ ಪಂಚಾಯತಿ/ನಗರ ಸ್ಥಳೀಯ ಸಂಸ್ಥೆಗಳ ಲೆಕ್ಕಪರಿಶೋಧನೆಯನ್ನು ಮುಂಬರುವ ಆರ್ಥಿಕ ವರ್ಷದಲ್ಲಿ ಕೈಗೊಳ್ಳಲು, ಕೆಎಸ್ಎಸ್ಎಡಿಯು ಪ್ರತಿವರ್ಷ ಮಾರ್ಚಿನ ಅಂತ್ಯದೊಳಗೆ ಲೆಕ್ಕಪರಿಶೋಧನೆಯ ಯೋಜನೆಯನ್ನು ಸಿದ್ಧಪಡಿಸಿ ರಾಜ್ಯದ ಮಹಾಲೇಖಾಪಾಲರ ಕಛೇರಿಗೆ (ಇನ್ನು ಮುಂದೆ ಎಜಿ(ಆಡಿಟ್) ಎಂದು ಉಲ್ಲೇಖಿಸಲಾಗಿದೆ) ಕಳುಹಿಸಬೇಕು. ಕೆಎಸ್ಎಎಡಿಯು 2021-22ನೇ ಸಾಲಿನ ತನ್ನ ಲೆಕ್ಕಪರಿಶೋಧನಾ ಯೋಜನೆಯನ್ನು ನಾಲ್ಕು ತಿಂಗಳ ವಿಳಂಬದ ನಂತರ ಜುಲೈ 30, 2021 ರಂದು ಸಲ್ಲಿಸಿತ್ತು.

ಕೆಎಸ್ಎಎಡಿಯ ಕೈಪಿಡಿಯ ಅಧ್ಯಾಯ-4ರಲ್ಲಿ ಹಾನಿಸಂಭವನೀಯ ವಿಶ್ಲೇಷಣೆ ಮತ್ತು ಲೆಕ್ಕಪರಿಶೋಧನೆಯಲ್ಲಿ ಮಾದರಿಗಳ ಬಳಕೆಯ ಪ್ರಾಮುಖ್ಯತೆಯನ್ನು ತೋರಿಸಲಾಗಿದೆ:

- ಲೆಕ್ಕಪರಿಶೋಧನೆಯ ಉದ್ದೇಶವನ್ನು ಪರೀಕ್ಷಾ-ತನಿಖೆಯಿಂದಲೇ ಸಾಧಿಸಬಹುದಾದ್ದರಿಂದ ಶೇಕಡಾ ನೂರರ ಲೆಕ್ಕ ತಪಾಸಣೆಯು ಅನಗತ್ಯವಾದುದಲ್ಲದೆ ದುಬಾರಿಯೂ ಆಗುತ್ತದೆ (ಕಂಡಿಕೆ 68).

- ಎಲ್ಲಾ ವ್ಯವಹಾರಗಳನ್ನು, ಘಟನೆಗಳನ್ನು, ದಾಖಲೆಗಳನ್ನು ಪರೀಕ್ಷಿಸಲು ಸಾಧ್ಯವಾಗದ ಕಾರಣ, ಲೆಕ್ಕತಪಾಸಣೆಗಾಗಿ, ಲೆಕ್ಕಪರಿಶೋಧಕರು ಹಾನಿಸಂಭವನೀಯ ವಿಶ್ಲೇಷಣೆಯನ್ನು ಬಳಸಿ ವಹಿವಾಟುಗಳನ್ನು ಕ್ಷೇತ್ರಗಳಾಗಿ ಅಥವಾ ಗುಂಪುಗಳಾಗಿ ವಿಂಗಡಿಸಿ ಲೆಕ್ಕಪರಿಶೋಧನೆಯನ್ನು ನಡೆಸುತ್ತಾರೆ (ಕಂಡಿಕೆ 69).

ಕೈಪಿಡಿಯ ಅಧ್ಯಾಯ–6ರಲ್ಲಿ, ವಿವಿಧ ರೀತಿಯ ಲೆಕ್ಕಪರಿಶೋಧನೆಯ ಘಟಕಗಳಿಗೆ ಮಾನವ ಸಂಪನ್ಮೂಲಗಳ ಹಂಚಿಕೆಯ ಬಗ್ಗೆ ವಿವರಣೆ ನೀಡಲಾಗಿದೆ. ವಿವಿಧ ಸಂಸ್ಥೆಗಳಿಗೆ ನಿಗದಿಪಡಿಸಲಾದ ಮಾನವ ದಿನಗಳ ವಿವರವನ್ನು **ಕೋಷ್ಟಕ–3.1**ರಲ್ಲಿ ತೋರಿಸಲಾಗಿದೆ.

ಕೋಷ್ಟಕ–3.1: ಲೆಕ್ಕಪರಿಶೋಧನೆಗೆ ನಿಗದಿಪಡಿಸಿದ ಮಾನವ ದಿನಗಳು

ಕ್ರ ಸ	ಸಂಸ್ಥೆ	ಮಾನವ ದಿನಗಳು
1	ಗ್ರಾಮ ಪಂಚಾಯಿತಿ	ಗರಿಷ್ಟ ಆರು
2	ಪಟ್ಟಣ ಪಂಚಾಯಿತಿ	25–40
3	ಪಟ್ಟಣ ಪುರಸಭೆ	40–50
4	ನಗರ ಪುರಸಭೆ	150–200
5	ಮಹಾನಗರ ಪಾಲಿಕೆ	ಸ್ಥಳೀಯ ಲೆಕ್ಕಪರಿಶೋಧನೆ ವೃತ್ತದ ಜಂಟಿ ನಿರ್ದೇಶಕರು, ಕ್ಷೇತ್ರೀಯ ಕಛೇರಿಯ ಜೊತೆ ಸಮಾಲೋಚಿಸಿ ನಿರ್ಧರಿಸಿದಂತೆ.

ಆಧಾರ: ಕೆಎಸ್ಎಎಡಿ ಕೈಪಿಡಿ

2021ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ಯೋಜನೆಯನ್ನು 2020ರ ಮಾರ್ಚ್ ವೇಳೆಗೆ ಪ್ರಾಥಮಿಕ ಲೆಕ್ಕಪರಿಶೋಧಕರು ಒದಗಿಸಲಿಲ್ಲ. ಎಲ್ಲಾ 6,005 ಗ್ರಾಮ ಪಂಚಾಯಿತಿಗಳು ಮತ್ತು 288 ನಗರ ಸ್ಥಳೀಯ ಸಂಸ್ಥೆಗಳನ್ನು ಲೆಕ್ಕಪರಿಶೋಧನೆಗಾಗಿ ಯೋಜಿಸಲಾಗಿರುವುದರಿಂದ ಕೆಎಸ್ಎಎಡಿಯು ಸಲ್ಲಿಸಿದ ವರ್ಷದ ಲೆಕ್ಕಪರಿಶೋಧನಾ ಯೋಜನೆಯು ಯಾವುದೇ ಹಾನಿಸಂಭವನೀಯ ವಿಶ್ಲೇಷಣೆಯನ್ನು ಸೂಚಿಸಲಿಲ್ಲ. ಕೆಎಸ್ಎಎಡಿ.ಯು 5,938 ಜಿಲ್ಲಾ ಪಂಚಾಯಿತಿಗಳು ಮತ್ತು 85 ನಗರ ಸ್ಥಳೀಯ ಸಂಸ್ಥೆಗಳ ಲೆಕ್ಕಪರಿಶೋಧನೆ ನಡೆಸಲಾಗಿದ್ದು, ಇದು ಪ್ರತಿ ಘಟಕಕ್ಕೆ ಕಡಿಮೆ ಮಾನವ ದಿನಗಳನ್ನು ಸೂಚಿಸುತ್ತದೆ.

ಸಿ.ಎ.ಜಿಯ ಅಧ್ಯಾದೇಶದ ಅನುಸಾರ, ಲೆಕ್ಕಪರಿಶೋಧನೆಗೆ ಒಳಪಡುವ ಎಲ್ಲಾ ಘಟಕಗಳನ್ನು ವೆಚ್ಚ ಮತ್ತು ಸ್ವೀಕೃತಿಗಳ ಪ್ರವೃತ್ತಿ, ಹಿಂದಿನ ತಪಾಸಣೆ ವರದಿಗಳಿಂದ ಗಮನಿಸಿದ ಲೆಕ್ಕಪರಿಶೋಧನಾ ಅವಲೋಕನಗಳು, ಪಂಚವಾರ್ಷಿಕ ಯೋಜನೆಗಳು ಮತ್ತು ಕಾರ್ಯನಿರತ ಗುಂಪುಗಳ ವರದಿಗಳು/ವಾರ್ಷಿಕ ಯೋಜನೆಗಳು ಇತ್ಯಾದಿಗಳ ವಿವರವಾದ ಹಾನಿಸಂಭವನೀಯ ವಿಶ್ಲೇಷಣೆಯ ಆಧಾರದ ಮೇಲೆ ಹೆಚ್ಚಿನ, ಮಧ್ಯಮ ಮತ್ತು ಕಡಿಮೆ ಹಾನಿಸಂಭವ ಘಟಕಗಳಾಗಿ ವರ್ಗೀಕರಿಸಲಾಗಿದೆ. ಹೆಚ್ಚಿನ ಅಪಾಯದ ಘಟಕಗಳನ್ನು ವಾರ್ಷಿಕವಾಗಿ ಲೆಕ್ಕಪರಿಶೋಧಿಸಿದರೆ, ಉಳಿದ ಘಟಕಗಳನ್ನು ಎರಡರಿಂದ ಐದು ವರ್ಷಗಳ ಅವಧಿಯಲ್ಲಿ ಲೆಕ್ಕಪರಿಶೋಧನೆಗೆ ಒಳಪಡಿಸಲಾಗುತ್ತದೆ. ಕೆಎಸ್ಎಎಡಿಯು ಸಲ್ಲಿಸಿದ ಲೆಕ್ಕಪರಿಶೋಧನಾ ಯೋಜನೆಯಿಂದ ಅದು ಹಾನಿಸಂಭವನೀಯ ವಿಶ್ಲೇಷಣಾ ವಿಧಾನವನ್ನು (ಸಿಎಜಿ ಅನುಸರಿಸಿದಂತೆ) ಅಳವಡಿಸಿಕೊಂಡಿರುವುದು ಕಂಡುಬಂದಿಲ್ಲ.

3.3 ಲೆಕ್ಕಪರಿಶೋಧನಾ ವಿಧಾನ ಮತ್ತು ಪ್ರಕ್ರಿಯೆ

ಪಂಚಾಯತ್ ರಾಜ್ ಸಂಸ್ಥೆಗಳು ಹಾಗೂ ನಗರ ಸ್ಥಳೀಯ ಸಂಸ್ಥೆಗಳ ಲೆಕ್ಕಪರಿಶೋಧನೆಯಲ್ಲಿ, ಭಾರತದ ಸಿಎಜಿಯು ನಿಗದಿಪಡಿಸಿದ ಮಾರ್ಗಸೂಚಿಗಳು ಹಾಗೂ ರಾಜ್ಯ ಸರ್ಕಾರ ಜಾರಿಗೊಳಿಸಿದ ವಿವಿಧ ಅಧಿನಿಯಮಗಳು ಮತ್ತು ಶಾಸನಗಳ ಅನುಪಾಲನೆಯನ್ನು ಪರೀಕ್ಷಿಸುವಂತೆ, ಲೆಕ್ಕಪರಿಶೋಧನೆಯ ವಿಧಾನಗಳನ್ನು ಮತ್ತು ಪ್ರಕ್ರಿಯೆಗಳನ್ನು ರಚಿಸಲಾಗಿದೆ.

ಟಿಜಿಎಸ್ ಅಡಿಯಲ್ಲಿ, ಸಿಎಜಿಯು ಹೆಚ್ಚಿನ ಖರ್ಚು ಮತ್ತು ವಹಿವಾಟುಗಳ ಪ್ರಮಾಣವನ್ನು ಆಧರಿಸಿ ಆಯ್ದ ಎರಡು ತಿಂಗಳುಗಳ ವಹಿವಾಟುಗಳ ಲೆಕ್ಕಪರಿಶೋಧನೆಯನ್ನು ನಡೆಸುತ್ತದೆ. ಆಯ್ದ ತಿಂಗಳುಗಳಲ್ಲಿ ಯಾವುದೇ ವ್ಯತ್ಯಾಸಗಳು ಕಂಡುಬಂದರೆ, ಹೆಚ್ಚಿನ ತನಿಖೆಗಾಗಿ ವಹಿವಾಟುಗಳ ಪರಿಶೀಲನೆಯನ್ನು ಇತರ ತಿಂಗಳುಗಳಿಗೆ ವಿಸ್ತರಿಸಲಾಗುತ್ತದೆ. ಕೆಎಸ್ಎಎಡಿಯೂ ಈ ಪದ್ಧತಿಯನ್ನು ಅಳವಡಿಸಿಕೊಳ್ಳುವುದನ್ನು ಪರಿಗಣಿಸಬಹುದು.

ಇದಲ್ಲದೆ, ಆಯ್ದ ವಿಷಯದ ಕಾರ್ಯಕ್ಷಮತೆ ಲೆಕ್ಕಪರಿಶೋಧನೆ ಮತ್ತು ಮಾಹಿತಿ ತಂತ್ರಜ್ಞಾನ ವ್ಯವಸ್ಥೆಗಳ ಲೆಕ್ಕಪರಿಶೋಧನೆಯಂತಹ ಇತರ ರೀತಿಯ ಲೆಕ್ಕಪರಿಶೋಧನೆಯನ್ನು ಕೆಎಸ್ಎಎಡಿಯು ಪ್ರಯತ್ನಿಸಬಹುದು.

3.4 ನಿಯತಕಾಲಿಕ ಸಲ್ಲಿಕೆಗಳು

ಪ್ರಾಥಮಿಕ ಲೆಕ್ಕಪರಿಶೋಧಕರ ಮೌಲ್ಯಮಾಪನವು ಸಿಎಜಿಯು ಸೂಚಿಸಿದ ಅನುಬಂಧ ಎ ನಿಂದ ಎಚ್ ವರೆಗಿನ ನಮೂನೆಗಳ ಪರಿಶೀಲನೆ, ಸ್ಥಳೀಯ ಲೆಕ್ಕಪರಿಶೋಧನಾ ವರದಿಗಳು ಮತ್ತು ಟಿಜಿಎಸ್ ಮಾಡ್ಯೂಲ್‌ನ ಅಡಿಯಲ್ಲಿ ಲೆಕ್ಕಪರಿಶೋಧನೆಗೆ ಆಯ್ಕೆಯಾದ ಗ್ರಾಮ ಪಂಚಾಯಿತಿಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳ ದಾಖಲೆಗಳ ಪರಿಶೀಲನೆಯನ್ನು ಆಧರಿಸಿದೆ. ಪ್ರಾಥಮಿಕ ಲೆಕ್ಕಪರಿಶೋಧಕರು 2020–21 ಮತ್ತು 2021–22ನೇ ಸಾಲಿಗೆ ಎಜಿ (ಆಡಿಟ್)ಗೆ ಸಲ್ಲಿಸಿದ ನಮೂನೆಯ ವಿವರಗಳನ್ನು **ಕೋಷ್ಟಕ–3.2**ರಲ್ಲಿ ನೀಡಲಾಗಿದೆ.

ಕೋಷ್ಟಕ–3.2: ಪ್ರಾಥಮಿಕ ಲೆಕ್ಕಪರಿಶೋಧಕರು ಒದಗಿಸಿದ ಮಾಹಿತಿ

ಅನುಬಂಧ	ಸಲ್ಲಿಕೆಯ ಹೆಸರು	ಆವೃತ್ತಿ	ವರ್ಷ	ನಿಗದಿತ ದಿನಾಂಕ	ವಾಸ್ತವಿಕ ಸಲ್ಲಿಕೆಯ ದಿನಾಂಕ	ಷರಾ
ಅನುಬಂಧ ಎ	ವಾರ್ಷಿಕ ಲೆಕ್ಕಪರಿಶೋಧನಾ ಯೋಜನೆ	ವಾರ್ಷಿಕ	2020–2021	31.03.2020	1.07.2021	ಲೆಕ್ಕಪರಿಶೋಧನಾ ಯೋಜನೆ ತಯಾರಿಸಿ ಸಲ್ಲಿಸಲಾಯಿತು. ವರ್ಷದಲ್ಲಿ ಒಟ್ಟು ಲಭ್ಯವಿದ್ದ ಕಾರ್ಯದಿನಗಳ ಸಂಖ್ಯೆ 233 ಆಗಿತ್ತು.
			2021–2022	31.03.2021	30.07.2021	ಲೆಕ್ಕಪರಿಶೋಧನಾ ಯೋಜನೆಯನ್ನು ಕಾರ್ಯಗತಗೊಳಿಸಿದ ನಂತರವೇ ಸ್ವೀಕರಿಸಲಾಯಿತು ಆದ್ದರಿಂದ ಮಹಾಲೇಖಾಪಾಲರು (ಲೆಕ್ಕಪರಿಶೋಧನೆ) ಈ ಕುರಿತು ಮಾರ್ಗದರ್ಶನ ನೀಡಲು ಸಾಧ್ಯವಾಗಲಿಲ್ಲ. .
ಅನುಬಂಧ ಬಿ	ಲೆಕ್ಕಪರಿಶೋಧನಾ ಯೋಜನೆಯ ಅನುಷ್ಠಾನ	ವಾರ್ಷಿಕ	2020–2021	15.04.2021	1.07.2021	ಒಟ್ಟು ಲೆಕ್ಕಪರಿಶೋಧಿಸಬಹುದಾದ ಘಟಕಗಳು (6,296) ಇರುತ್ತದೆ, ಆದರೆ ಅವುಗಳಲ್ಲಿ ಕೇವಲ ಐದು ಘಟಕಗಳನ್ನು ಮಾತ್ರ ಲೆಕ್ಕಪರಿಶೋಧನೆ ಮಾಡಲಾಗಿದೆ.
			2021–2022	15.04.2022	20.05.2022	6,296 ಘಟಕಗಳ ವಿರುದ್ಧವಾಗಿ, ಕೇವಲ 5,722 ಘಟಕಗಳಲ್ಲಿ ಲೆಕ್ಕಪರಿಶೋಧನೆ ನಡೆಸಲಾಗಿತ್ತು.
ಅನುಬಂಧ ಸಿ	ಗಂಭೀರ ಅಕ್ರಮಗಳು	ತ್ರೈಮಾಸಿಕ	2020–2021	15.07.2020 15.10.2020 15.01.2021 15.04.2022	1.07.2021	ಗಂಭೀರ ಅಕ್ರಮಗಳ ವಿವರಗಳನ್ನು ಪರೀಕ್ಷಾತ್ಮಕ ಪರಿಶೀಲನೆ ಮತ್ತು ಮಾರ್ಗದರ್ಶನ ನೀಡಲು ಮಹಾಲೇಖಾಪಾಲರಿಗೆ (ಲೆಕ್ಕಪರಿಶೋಧನೆ) ಕರ್ನಾಟಕ ರಾಜ್ಯ ಲೆಕ್ಕಪರಿಶೋಧನಾ ಇಲಾಖೆ ತಿಳಿಸಲಿಲ್ಲ.
			2021–2022	15.07.2021 15.10.2021 15.01.2022 15.04.2022	20.05.2022	ಗಂಭೀರ ಅಕ್ರಮಗಳು ವಿವರಗಳನ್ನು ಮಾರ್ಗದರ್ಶನ ನೀಡಲು ಮತ್ತು ಪರೀಕ್ಷಾತ್ಮಕ ಪರಿಶೀಲನೆ ನಡೆಸಲು ಉದ್ದೇಶದಿಂದ ಮಹಾಲೇಖಾಪರಿಶೋಧಕರಿಗೆ

ಅನುಬಂಧ	ಸಲ್ಲಿಕೆಯ ಹೆಸರು	ಆವೃತ್ತಿ	ವರ್ಷ	ನಿಗದಿತ ದಿನಾಂಕ	ವಾಸ್ತವಿಕ ಸಲ್ಲಿಕೆಯ ದಿನಾಂಕ	ಷರಾ
						(ಲೆಕ್ಕಪರಿಶೋಧನೆ) ಕರ್ನಾಟಕ ರಾಜ್ಯ ಲೆಕ್ಕಪರಿಶೋಧನಾ ಇಲಾಖೆಯು ತಿಳಿಸಲಿಲ್ಲ.
ಅನುಬಂಧ ಡಿ	ತರಬೇತಿ ಕಾರ್ಯಕ್ರಮಗಳು	ಅರ್ಧ ವಾರ್ಷಿಕ	2020–2021	ಆಗಸ್ಟ್–20 ಮತ್ತು ಫೆಬ್ರವರಿ–21	1.07.2021	ಅವಧಿಯಲ್ಲಿ 55 ಸಿಬ್ಬಂದಿಗೆ ತರಬೇತಿ ನೀಡುವ ಯೋಜನೆಯನ್ನು ಮಹಾಲೇಖಾಪಾಲರು (ಲೆಕ್ಕಪರಿಶೋಧನೆ) ರೂಪಿಸಿದ್ದರು.
			2021–2022	ಆಗಸ್ಟ್–21 ಮತು ಫೆಬ್ರವರಿ–22	20.05.2022	ಮಹಾಲೇಖಾಪಾಲರು (ಲೆಕ್ಕಪರಿಶೋಧನೆ) ಸೆಪ್ಟೆಂಬರ್–2021 ರಂದು ಕರ್ನಾಟಕ ರಾಜ್ಯ ಲೆಕ್ಕಪರಿಶೋಧನಾ ಇಲಾಖೆಯ 28 ಅಧಿಕಾರಿಗೆ ತರಬೇತಿಯನ್ನು ನೀಡಿದರು.
ಅನುಬಂಧ ಇ	ಜಿಲ್ಲಾ ಮಟ್ಟದ ಸ್ಥಳೀಯ ನಿಧಿಯ ಲೆಕ್ಕಪರಿಶೋಧಕರ ಪರಿಶೀಲನಾ ವರದಿಗಳು ಮತ್ತು ಕಂಡಿಕೆಗಳ ಪ್ರಗತಿ ವರದಿ	ವಾರ್ಷಿಕ	2020–2021	15.04.2021	1.07.2021	2020–21ನೇ ಸಾಲಿನಲ್ಲಿ ಕೆಎಸ್ಎಎಡಿ ಆಕ್ಷೇಪಣೆಗಳಿಗೆ ಸಂಬಂಧಿಸಿದ 5,046 ಕಂಡಿಕೆಗಳನ್ನು (₹ 5,002.66 ಲಕ್ಷ) ಮತ್ತು ಮೊತ್ತದ ವಸೂಲಾತಿಗೆ ಸಂಬಂಧಿಸಿದ 3,829 ಕಂಡಿಕೆಗಳನ್ನು (₹963.64 ಲಕ್ಷಗಳನ್ನು) ಇತ್ಯರ್ಥಪಡಿಸಿದೆ.
			2021–2022	15.04.2022	20.05.2022	2021–22ನೇ ಸಾಲಿನಲ್ಲಿ ಕೆಎಸ್ಎಎಡಿ 12,658 (₹.24,055.65 ಲಕ್ಷ) ಕಂಡಿಕೆಗಳನ್ನು ಮತ್ತು ಮೊತ್ತದ ವಸೂಲಾತಿಗೆ ಸಂಬಂಧಿಸಿದಂತೆ 6,673 (₹1,821.74 ಲಕ್ಷ) ಕಂಡಿಕೆಗಳನ್ನು ಇತ್ಯರ್ಥಪಡಿಸಿದೆ.
ಅನುಬಂಧ ಎಫ್	ಮಹಾಲೇಖಾಪಾಲಕರು ಜಿಲ್ಲಾ ಮಟ್ಟದ ಸ್ಥಳೀಯ ನಿಧಿಯ ಪರಿಶೋಧನೆಗೆ ಕಳುಹಿಸಿರುವ ಪರಿಕ್ಷಾ ಪರಿಶೀಲನೆಗೊಳಪಟ್ಟ ಘಟಕಗಳ ಐಆರ್‌ಗಳು ಮತ್ತು ಕಂಡಿಕೆಗಳ ಪ್ರಗತಿ ವರದಿಯನ್ನು	ವಾರ್ಷಿಕ	2020–2021	15.04.2021	1.07.2021	ಕೆಎಸ್ಎಎಡಿಯು ಆಕ್ಷೇಪಣೆಗಳಿಗೆ ಸಂಬಂಧಿಸಿದ 295 ಪ್ಯಾರಾಗಳನ್ನು ಮತ್ತು ವಸೂಲಾತಿಗೆ ಸಂಬಂಧಿಸಿದ 337 ಕಂಡಿಕೆಳನ್ನು ಇತ್ಯರ್ಥಪಡಿಸಿತ್ತು.
			2021–2022	15.04.2022	20.05.2022	ಕರ್ನಾಟಕ ರಾಜ್ಯ ಲೆಕ್ಕಪತ್ರ ಮತ್ತು ಲೆಕ್ಕಪರಿಶೋಧನಾ ಇಲಾಖೆಯು ಮಹಾಲೇಖಾಪರಿಶೋಧಕರವರ (ಲೆಕ್ಕಪರಿಶೋಧನೆ) ಕಂಡಿಕೆಗಳ ಇತ್ಯರ್ಥಕ್ಕೆ ಪರಶೀಲನೆಯನ್ನು ಮುಂದುವರೆಸಲಿಲ್ಲ.
ಅನುಬಂಧ ಜಿ	ಕ್ರೋಢೀಕರಿಸಿದ ಕಾರ್ಯಕ್ಷಮತಾ ವರದಿ	ಅರ್ಧ ವಾರ್ಷಿಕ	2020–2021	15.10.2020 15.04.2021	1.07.2021	ಕರ್ನಾಟಕ ರಾಜ್ಯ ಲೆಕ್ಕಪರಿಶೋಧನಾ ಇಲಾಖೆಯು ವರದಿ ಮಾಡಿದಂತೆ, ವರ್ಷ 2020–21 ರಲ್ಲಿ 5,722 ಘಟಕಗಳಲ್ಲಿ ಲೆಕ್ಕಪರಿಶೋಧನೆ ನಡೆಸಲಾಗಿದ್ದು, 4,985 ಸ್ಥಳೀಯ ಲೆಕ್ಕಪರಿಶೋಧನಾ ವರದಿಗಳನ್ನು (ಎಲ್.ಎ.ಆರ್) ಬಿಡುಗಡೆ ಮಾಡಲಾಗಿತ್ತು, ಇದರಲ್ಲಿ 4,555 ಎಲ್.ಎ.ಆರ್ ಗಳನ್ನು ನಿಗದಿತ ಸಮಯದೊಳಗೆ ಜಾರಿಮಾಡಲಾಗಿತ್ತು.
			2021–2022	15.10.2021 15.04.2022	20.05.2022	ಅದೇ ರೀತಿ, ಕೆಎಸ್.ಎ.ಎ.ಡಿಯು ವರದಿ ಮಾಡಿದಂತೆ, ವರ್ಷ 2021–22 ರಲ್ಲಿ 5,987 ಘಟಕಗಳಲ್ಲಿ ಲೆಕ್ಕಪರಿಶೋಧನೆ ನಡೆಸಲಾಗಿದ್ದು, 5,893 ಎಲ್.ಎ.ಆರ್ ಗಳನ್ನು ಬಿಡುಗಡೆ ಮಾಡಲಾಗಿತ್ತು, ಇದರಲ್ಲಿ 5,882 ಎಲ್.ಎ.ಆರ್ ಗಳನ್ನು ನಿಗದಿತ ಕಾಲಮಿತಿಯೊಳಗೆ ನೀಡಲಾಗಿದೆ.
ಅನುಬಂಧ ಎಚ್	ಹಣಕಾಸು ಲೆಕ್ಕಪತ್ರಗಳ ಪ್ರಮಾಣೀಕರಣದ ಸ್ಥಿತಿ	ವಾರ್ಷಿಕ	2020–2021	15.04.2021	1.07.2021	ಗ್ರಾಮ ಪಂಚಾಯಿತಿಗಳ ಲೆಕ್ಕಪತ್ರಗಳ ಪ್ರಮಾಣೀಕರಣದ ಸ್ಥಿತಿಯನ್ನು ಕರ್ನಾಟಕ ರಾಜ್ಯ ಲೆಕ್ಕಪರಿಶೋಧನಾ ಇಲಾಖೆಯು ಸಲ್ಲಿಸಿಲ್ಲ.
			2021–2022	15.04.2022	ಸಲ್ಲಿಸಲಿಲ್ಲ	

ಆಧಾರ: ಕೆಎಸ್ಎಎಡಿ ಒದಗಿಸಿದ ಮಾಹಿತಿ

3.5 ತಪಾಸಣಾ ವರದಿಗಳ ಪ್ರತಿಗಳು

ಆಯ್ದ ಗ್ರಾಮ ಪಂಚಾಯಿತಿಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಿಸಿದ ಐಆರ್‌ಗಳ ಪ್ರತಿಗಳನ್ನು ಪ್ರಾಥಮಿಕ ಲೆಕ್ಕಪರಿಶೋಧಕರು ಎಜಿ (ಆಡಿಟ್) ಗೆ ವ್ಯವಸ್ಥೆಯನ್ನು ಉತ್ತಮಗೊಳಿಸುವ ಬಗ್ಗೆ ಸಲಹೆಗಾಗಿ ಕಳುಹಿಸಬೇಕು ಮತ್ತು ಕೆಎಸ್‌ಎಎಡಿಯು ಅನುಸರಿಸುತ್ತಿರುವ ಅಸ್ತಿತ್ವದಲ್ಲಿರುವ ವ್ಯವಸ್ಥೆಗಳ ಸುಧಾರಣೆಗೆ ಸಲಹೆಗಳನ್ನು ನೀಡುವ ಉದ್ದೇಶದಿಂದ ಎಜಿ (ಆಡಿಟ್) ಅದನ್ನು ಪರಿಶೀಲಿಸಬೇಕು. ಕೆಎಸ್‌ಎಎಡಿಯು ಒದಗಿಸಿದ 2020–21 ಮತ್ತು 2021–22 ವರ್ಷಗಳ ಆಯ್ದ 45 ಮತ್ತು 71 ಗ್ರಾಮ ಪಂಚಾಯಿತಿಗಳ ಸ್ಥಳೀಯ ಲೆಕ್ಕಪರಿಶೋಧನಾ ವರದಿಗಳನ್ನು (ಎಲ್‌ಎಆರ್) ಸಿಎಜಿಯವರು ಪರಿಶೀಲಿಸಿದರು.

ಕೆಎಸ್‌ಎಎಡಿಯ ಐಆರ್‌ಗಳ ಪರಿಶೀಲನೆಯ ಸಮಯದಲ್ಲಿ ಮತ್ತು ಸಿಎಜಿಯು ನಡೆಸಿದ ಹೆಚ್ಚಿನ ವಿವರವಾದ ವಿಶ್ಲೇಷಣೆಯಲ್ಲಿ ಕಂಡುಬಂದ ಫಲಿತಾಂಶಗಳನ್ನು ಕೆಳಗೆ ಚರ್ಚಿಸಲಾಗಿದೆ.

3.5.1 ಪ್ರಾಥಮಿಕ ಲೆಕ್ಕಪರಿಶೋಧಕರಿಂದ ಲೆಕ್ಕಪರಿಶೋಧಿತ ಗ್ರಾಮ ಪಂಚಾಯಿತಿಗಳ ಪರೀಕ್ಷಾ ತನಿಖೆ

ಪ್ರಾಥಮಿಕ ಲೆಕ್ಕಪರಿಶೋಧಕರು 5,297 ಗ್ರಾಮ ಪಂಚಾಯಿತಿಗಳ (ಜನವರಿ 2021), 5,938 ಗ್ರಾಮ ಪಂಚಾಯಿತಿಗಳ (ಫೆಬ್ರವರಿ 2023) ಲೆಕ್ಕಪರಿಶೋಧನೆ ನಡೆಸಿದರು, ಅವುಗಳಲ್ಲಿ 2020–21 ಮತ್ತು 2021–22 ವರ್ಷಗಳಲ್ಲಿ ಆಗಿರುವ ವೆಚ್ಚಗಳ ಆಧಾರದ ಮೇಲೆ ಮತ್ತು ಎಜಿ (ಆಡಿಟ್) ಕಛೇರಿಯಲ್ಲಿ ಲಭ್ಯವಿರುವ ಮಾನವಸಂಪನ್ಮೂಲಗಳ ಆಧಾರದ ಮೇಲೆ ಸಿಎಜಿರವರು 45 ಮತ್ತು 71 ಗ್ರಾಮ ಪಂಚಾಯಿತಿಗಳನ್ನು ಕ್ರಮವಾಗಿ ಪರೀಕ್ಷಾ ಪರಿಶೀಲನೆಗೆ ಆಯ್ಕೆ ಮಾಡಿದರು (**ಅನುಬಂಧ–3.1**).

3.6 ಸಿಎಜಿ ನಡೆಸಿದ ಗ್ರಾಮ ಪಂಚಾಯ್ತಿಗಳ ಪರೀಕ್ಷಾ ಪರಿಶೀಲನೆಯಿಂದ ಬಂದ ಪ್ರಮುಖ ಲೆಕ್ಕಪರಿಶೋಧನಾ ಅಂಶಗಳು

3.6.1 ಕಟ್ಟಡ ಪರವಾನಗಿ ಶುಲ್ಕದ ಕಡಿಮೆ ಸಂಗ್ರಹ – ₹ 45.61 ಲಕ್ಷ

ಐಆರ್‌ನ ವಿಮರ್ಶೆ: ದೊಡ್ಡಬನಹಳ್ಳಿ ಗ್ರಾ. ಪಂ, ಕಿತ್ತಗನೂರು ಗ್ರಾ. ಪಂ, ಮಂಡ್ಯ ಗ್ರಾಮಾಂತರ ಗ್ರಾ. ಪಂ. ಕಣ್ಣೂರು, ಗ್ರಾ. ಪಂ ಮತ್ತು ಮಾಯಸಂದ್ರ ಗ್ರಾ. ಪಂ ಗಳಲ್ಲಿ ಪರವಾನಗಿಗಳ ವಿತರಣೆಗೆ ವಹಿಗಳನ್ನು ನಿರ್ವಹಿಸದ ಕಾರಣ ದತ್ತಾಂಶದ ನಿಖರತೆಯನ್ನು ಪರಿಶೀಲಿಸಲು ಸಾಧ್ಯವಾಗಲಿಲ್ಲ ಎಂದು ಕೆಎಸ್‌ಎಎಡಿಯು ತಮ್ಮ ತನಿಖಾ ವರದಿಯಲ್ಲಿ ತಿಳಿಸಿದೆ.

ಮೇಲಿನ ಐದು ಗ್ರಾಮ ಪಂಚಾಯಿತಿಗಳಲ್ಲಿ ಕಟ್ಟಡ ಪರವಾನಗಿಗಳ ವಿತರಣೆ ಮತ್ತು ಸಂಗ್ರಹಿಸಲಾದ ಶುಲ್ಕಕ್ಕೆ ಸಂಬಂಧಿಸಿದ ಕಡತಗಳ ವಿವರವಾದ ವಿಶ್ಲೇಷಣೆಯಿಂದ, ಲೆಕ್ಕಪರಿಶೋಧನೆಯು ಗ್ರಾಮ ಪಂಚಾಯಿತಿಗಳು ಕಟ್ಟಡ ಪರವಾನಗಿಗಳ ವಿತರಣೆಗಾಗಿ 2016–17 ರಿಂದ 2018–19 ಅವಧಿಗೆ ₹ 119.16 ಲಕ್ಷದ ಬದಲು ₹ 73.55 ಲಕ್ಷದಷ್ಟು ಶುಲ್ಕವನ್ನು ಸಂಗ್ರಹಿಸಿದವು, ಎಂದು ಗಮನಿಸಿತು (ಮಾರ್ಚ್ 2021). ಇದರ ಪರಿಣಾಮವಾಗಿ ₹ 45.61 ಲಕ್ಷದಷ್ಟು ಕಡಿಮೆ ಸಂಗ್ರಹವಾಯಿತು. ವಿವರಗಳನ್ನು **ಅನುಬಂಧ–3.2**ರಲ್ಲಿ ನೀಡಲಾಗಿದೆ.

3.6.2 ಕಟ್ಟಡ ಪರವಾನಗಿ ಶುಲ್ಕ ₹ 86.05 ಲಕ್ಷ ವಸೂಲಿಸದಿರುವುದು/ಕಡಿಮೆ ವಸೂಲಿಸಿರುವುದು

ಕರ್ನಾಟಕ ಸರ್ಕಾರವು, ಕೆಪಿಆರ್ ಕಾಯ್ದೆಯ (1993ರ ಕರ್ನಾಟಕ ಕಾಯ್ದೆ 14) ಪರಿಚ್ಛೇಧ 311 ರೊಂದಿಗೆ ಓದಲಾದ ಪರಿಚ್ಛೇಧ 315ರ ಅಡಿಯಲ್ಲಿ ನೀಡಲಾದ ಅಧಿಕಾರವನ್ನು ಚಲಾಯಿಸಿ, ಕೆಪಿಆರ್ (ಜಿಲ್ಲಾ

ಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಗ್ರಾಮ ಪಂಚಾಯತಿ ಕಟ್ಟಡಗಳ ನಿರ್ಮಾಣದ ಮೇಲೆ ನಿಯಂತ್ರಣ) ಮಾದರಿ ಉಪ–ಕಾನೂನುಗಳು, 2015 ಅನ್ನು ರಚಿಸಿತು.

ಮೇಲಿನ ಮಾದರಿ ಉಪ–ಕಾನೂನುಗಳು–2015ರ ನಿಯಮ 4 ರಿಂದ 7ರ ಪ್ರಕಾರ, ಯಾವುದೇ ಕಟ್ಟಡವನ್ನು ನಿರ್ಮಿಸಲು, ಮರುನಿರ್ಮಿಸಲು ಅಥವಾ ಮುಖ್ಯವಾದ ಮಾರ್ಪಾಡು ಮಾಡಲು ಅಥವಾ ಕೆಡವಲು ಉದ್ದೇಶಿಸಿರುವ ಪ್ರತಿಯೊಬ್ಬ ವ್ಯಕ್ತಿಯು, ಅನುಸೂಚಿ–1ರಲ್ಲಿ ನೀಡಲಾದ ಫಾರ್ಮ್ ನಲ್ಲಿ ಕಟ್ಟಡದ ನಿರ್ಮಾಣ, ಪುನರ್ನಿರ್ಮಾಣ, ಮುಖ್ಯವಾದ ಮಾರ್ಪಾಡು ಅಥವಾ ಕೆಡವುವಿಕೆಗಾಗಿ ಲಿಖಿತ ಅರ್ಜಿಯನ್ನು ಅಂತಹ ಪ್ರಾಧಿಕಾರಕ್ಕೆ ಸಲ್ಲಿಸಬೇಕು ಮತ್ತು ಖಾತಾ ಪ್ರಮಾಣಪತ್ರ, ಶುಲ್ಕದ ರಸೀದಿಗಳು, ಕಟ್ಟಡದ ನಮೂನೆ ಮತ್ತು ನಿರ್ದಿಷ್ಟತೆಗಳು ಹಾಗೂ ತಃಖ್ತೆಗಳನ್ನು ತ್ರಿಪ್ರತಿಯಲ್ಲಿ ಲಗತ್ತಿಸಬೇಕು.

ಇದಲ್ಲದೆ, ನಿಯಮ 8 (1)ರ ಪ್ರಕಾರ, ಉಪ–ನಿಯಮ (4) ಮತ್ತು (7)ರ ಅಡಿಯಲ್ಲಿ ಸಲ್ಲಿಸಲಾದ ಯಾವುದೇ ಅರ್ಜಿಯು, ಕೆಳಗೆ ನಿರ್ದಿಷ್ಟಪಡಿಸಿದಂತೆ ಅಗತ್ಯ ಪರವಾನಗಿ ಶುಲ್ಕವನ್ನು ಪಾವತಿಸಿದ್ದಕ್ಕಾಗಿ ಚಲನ್ ಅಥವಾ ಸ್ವೀಕೃತಿಯನ್ನು ಅರ್ಜಿ ಸಲ್ಲಿಸುವ ವ್ಯಕ್ತಿಯು ಲಗತ್ತಿಸದ ಹೊರತು ಮಾನ್ಯವಾಗಿರುವುದಿಲ್ಲ.

ಕೈಗಾರಿಕೆಗಳು

(ಎ) ವಿವಿಧ ರೀತಿಯ ಕೈಗಾರಿಕಾ ಕಟ್ಟಡಗಳ ಮೇಲೆ ವಿಧಿಸಬೇಕಾದ ಶುಲ್ಕವನ್ನು ಅನುಸೂಚಿ 10ರಲ್ಲಿ ತೋರಿಸಲಾಗಿದೆ.

(ಬಿ) ಅಂದಾಜು ₹ 10 ಲಕ್ಷಗಳನ್ನು ಮೀರಿದರೆ, ಒಟ್ಟು ಅಂದಾಜು ಮೊತ್ತದ ಶೇಕಡಾ ಒಂದರಷ್ಟು ಮೊತ್ತವನ್ನು ಅನುಸೂಚಿ 10ರಲ್ಲಿ ತೋರಿಸಿರುವ ಮೊತ್ತದ ಜೊತೆಗೆ ಕಾರ್ಮಿಕ ಉಪಕರವಾಗಿ ಪಾವತಿಸಬೇಕಾಗುತ್ತದೆ.

ಇದಲ್ಲದೆ, ಶುಲ್ಕವನ್ನು ಲೆಕ್ಕಾಚಾರ ಮಾಡಲು ನೆಲಮಾಳಿಗೆಯನ್ನು ಒಳಗೊಂಡ ಪ್ರದೇಶವನ್ನು ಪರಿಗಣಿಸಬೇಕೆಂದು ನಿಯಮ 8(2)(v) ವಿಧಿಸುತ್ತದೆ.

ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿನ ಶಿವಾರುಪಟ್ಟಣ ಮತ್ತು ನೊಸಗೆರೆ ಗ್ರಾಮ ಪಂಚಾಯಿತಿಗಳಿಗೆ ಸಂಬಂಧಿಸಿದ ಡೇ ಬುಕ್, ಬ್ಯಾಂಕ್ ಪಾಸ್‌ಬುಕ್ ಮತ್ತು ಇತರ ಸಂಬಂಧಿತ ದಾಖಲೆಗಳನ್ನು 2017–18 ರಿಂದ 2019–20 ರವರೆಗಿನ ವರ್ಷಗಳಲ್ಲಿ ಪರಿಶೀಲಿಸಿದಾಗ, **ಅನುಬಂಧ–3.3**ರಲ್ಲಿ ವಿವರಿಸಿದಂತೆ ನಾಲ್ಕು ಪ್ರಕರಣಗಳಲ್ಲಿ ₹ 86.05 ಲಕ್ಷ ಮೊತ್ತದ ಕಟ್ಟಡ ಪರವಾನಗಿ ಶುಲ್ಕ ಕಡಿಮೆ ವಸೂಲಿಸಿರುವುದು/ವಸೂಲಿಯಾಗದಿರುವುದು ಕಂಡುಬಂದಿದೆ(ಮಾರ್ಚ್ 2022).

ಅಸ್ತಿತ್ವದಲ್ಲಿರುವ ಕಾಯಿದೆಗಳು ಮತ್ತು ನಿಯಮಗಳ ಪ್ರಕಾರ ಕಟ್ಟಡಗಳ ವಿಸ್ತೀರ್ಣ/ವಿಧದ ಆಧಾರದ ಮೇಲೆ ಕಟ್ಟಡ ಪರವಾನಗಿ ಶುಲ್ಕದ ನಿಜವಾದ ಮೊತ್ತವನ್ನು ನಿರ್ಧರಿಸಲು ಸಂಬಂಧಪಟ್ಟ ಗ್ರಾಮ ಪಂಚಾಯಿತಿಯ ಪಿಡಿಒರವರು ಆಸ್ತಿ ಮೌಲ್ಯಮಾಪನವನ್ನು ನಡೆಸಬೇಕಾಗುತ್ತದೆ.[12]

ರಾಜ್ಯ ಸರ್ಕಾರವು ಲೆಕ್ಕಪರಿಶೋಧನೆಯ ಅವಲೋಕನವನ್ನು ಸ್ವೀಕರಿಸುತ್ತಾ ಈ ನಿಟ್ಟಿನಲ್ಲಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿತು(ಜೂನ್ 2024).

ಶಿಫಾರಸು: ಮೌಲ್ಯಮಾಪನ ಮತ್ತು ಸಂಗ್ರಹಣೆಯ ನಿಖರತೆಯನ್ನು ಖಚಿತಪಡಿಸಿಕೊಳ್ಳಲು ಪರವಾನಗಿ ಶುಲ್ಕ ವಿಧಿಸುವಿಕೆಗೆ ಸಂಬಂಧಿಸಿದ ಎಲ್ಲಾ ಕಡತಗಳನ್ನು ಪರಿಶೀಲಿಸಲು ರಾಜ್ಯ ಸರ್ಕಾರವು ಕೆಎಸ್ಎಎಡಿಗೆ ನಿರ್ದೇಶಿಸಬೇಕು.

12 ಅನ್ವೇಶ್ವರ (ಆಗಸ್ಟ್ 2021), ಹುಲಿಮಂಗಲ ಕಗ್ಗಲೀಪುರ ಮತ್ತು ಮುಗಳೂರು (ಮಾರ್ಚ್ 2021).

3.6.3 ಚೆಕ್‌ಗಳು ಅಮಾನ್ಯವಾದ್ದರಿಂದ ಬಾಕಿಗಳನ್ನು ವಸೂಲಿ ಮಾಡದ ಕಾರಣ ಆದಾಯದ ನಷ್ಟ– ₹48.74 ಲಕ್ಷ

ತಪಾಸಣಾ ವರದಿಯ ಪರಿಶೀಲನೆ: ಕಗ್ಗಲೀಪುರ, ಮುಗಳೂರು, ಹುಲಿಮಂಗಲ ಮತ್ತು ಅನ್ನೇಶ್ವರ ಗ್ರಾಮ ಪಂಚಾಯಿತಿಗಳಲ್ಲಿ, ಕೆಪಿಆರ್ (ಗ್ರಾಮ ಪಂಚಾಯಿತಿ ಬಜೆಟ್ ಮತ್ತು ಲೆಕ್ಕಪತ್ರ ನಿರ್ವಹಣೆ) ನಿಯಮಗಳು 2006ರ ನಿಯಮ 20ರ ಪ್ರಕಾರ, ಗ್ರಾಮ ಪಂಚಾಯಿತಿ ಆದಾಯಕ್ಕಾಗಿ ಸ್ವೀಕರಿಸಿದ ಚೆಕ್‌ಗಳು/ಡಿಡಿಗಳಿಗೆ ಸಂಬಂಧಿಸಿದಂತೆ ಫಾರ್ಮ್ 3ಎ ಅನ್ನು ನೀಡದಿರುವ ಬಗ್ಗೆ ಪ್ರತಿಕ್ರಿಯಿಸಿತ್ತು.

ಗ್ರಾಮ ಪಂಚಾಯಿತಿ (ಬಜೆಟ್ ಮತ್ತು ಲೆಕ್ಕಪತ್ರ) ನಿಯಮಗಳು 2006ರ ನಿಯಮ 20ರ ಪ್ರಕಾರ, ಗ್ರಾಮ ಪಂಚಾಯಿತಿ ಸದಸ್ಯರು ಚೆಕ್‌ಗಳು ಅಥವಾ ಬ್ಯಾಂಕ್ ಡ್ರಾಫ್ಟ್‌ಗಳ ಮೂಲಕ ಪಾವತಿಯನ್ನು ಸ್ವೀಕರಿಸಿದಾಗ, ಯಾವುದೇ ನಗದು ರಶೀದಿಯನ್ನು ನೀಡಲಾಗುವುದಿಲ್ಲ. ಬದಲಾಗಿ, ನಮೂನೆ–3(ಎ) ನಲ್ಲಿ ತಾತ್ಕಾಲಿಕ ರಶೀದಿಯನ್ನು ನೀಡಲಾಗುತ್ತದೆ. ಸದರಿ ಚೆಕ್/ಬ್ಯಾಂಕ್ ಡ್ರಾಫ್ಟ್ ಅನ್ನು ನಗದೀಕರಿಸಿದ ನಂತರ, ನಮೂನೆ–3ರಲ್ಲಿ ಅಧಿಕೃತ ರಶೀದಿಯನ್ನು ಸಂದಾಯದಾರರಿಗೆ ನೀಡಲಾಗುತ್ತದೆ. ಜಮೆಯ ಸಮಯದಲ್ಲಿ ಬ್ಯಾಂಕ್ ಚೆಕ್ ಅನ್ನು ತಿರಸ್ಕರಿಸಿದರೆ, ಆ ಸಂಗತಿಯನ್ನು ತಕ್ಷಣವೇ ಸಂದಾಯದಾರರಿಗೆ ತಿಳಿಸಬೇಕು ಮತ್ತು ನಗದು ರೂಪದಲ್ಲಿ ಪಾವತಿಯ ಬೇಡಿಕೆಯನ್ನು ಮಾಡಬೇಕು. ಕಚೇರಿಯಲ್ಲಿ ಸ್ವೀಕರಿಸಿದ ಚೆಕ್‌ಗಳು/ಬ್ಯಾಂಕ್ ಡ್ರಾಫ್ಟ್‌ಗಳ ವಿವರವಾದ ದಾಖಲೆಯನ್ನು ಫಾರ್ಮ್–4ರಲ್ಲಿ ನಿರ್ವಹಿಸಬೇಕು. ಚೆಕ್‌ಗಳು ಅಥವಾ ಬ್ಯಾಂಕ್ ಡ್ರಾಫ್ಟ್‌ಗಳ ಆದಾಯವನ್ನು ಮರುದಿನದೊಳಗೆ ಖಜಾನೆ/ಬ್ಯಾಂಕ್‌ನಲ್ಲಿರುವ ಗ್ರಾಮ ಪಂಚಾಯ್ತಿ ಖಾತೆಗೆ ಜಮಾ ಮಾಡಬೇಕು.

ಆದಾಗ್ಯೂ, ದೈನಂದಿನ ದಾಖಲೆ ಪುಸ್ತಕ, ನಗದು ಸ್ವೀಕೃತಿ, ನಗದು ಪುಸ್ತಕ ಮುಂತಾದ ದಾಖಲೆಗಳ ಪರೀಕ್ಷಾ ಪರಿಶೀಲನೆಯ ಸಮಯದಲ್ಲಿ, ಈ ಕೆಳಗಿನ ವ್ಯತ್ಯಾಸಗಳು ಕಂಡುಬಂದಿವೆ:

ಸದರಿ ಪರೀಕ್ಷೆಯಲ್ಲಿ ನಾಲ್ಕು[12] ಗ್ರಾಮ ಪಂಚಾಯಿತಿಗಳು ತೆರಿಗೆದಾರರಿಂದ ಚೆಕ್‌ಗಳು/ಡ್ರಾಫ್ಟ್‌ಗಳನ್ನು ಸ್ವೀಕರಿಸುತ್ತಿದ್ದು, ಮೇಲೆ ಸೂಚಿಸಿದಂತೆ ಫಾರ್ಮ್–3(ಎ) ನಲ್ಲಿ ತಾತ್ಕಾಲಿಕ ಸ್ವೀಕೃತಿಯ ಬದಲಿಗೆ ನೇರವಾಗಿ ನಗದು ಸ್ವೀಕೃತಿಗಳನ್ನು ನೀಡುತ್ತಿದ್ದರು. ಸ್ವೀಕರಿಸಿದ ಚೆಕ್‌ಗಳು/ಬ್ಯಾಂಕ್ ಡ್ರಾಫ್ಟ್‌ಗಳ ವಿವರವಾದ ದಾಖಲೆಯನ್ನು ಫಾರ್ಮ್–4 ರಲ್ಲಿ ನಿರ್ವಹಿಸಲಾಗಿಲ್ಲ. ತೆರಿಗೆದಾರರ ಹೆಸರು, ವಿಳಾಸ, ಸರ್ವೇ ಸಂಖ್ಯೆ/ನಿವೇಶನ ಸಂಖ್ಯೆ ಇತ್ಯಾದಿಗಳನ್ನು ಸಾಮಾನ್ಯ ರಶೀದಿಯಲ್ಲಿ ದಾಖಲಿಸಲಾಗಿಲ್ಲ, ಇದರ ಪರಿಣಾಮವಾಗಿ, ತೆರಿಗೆ ಸ್ವೀಕೃತಿಗಳನ್ನು ಗ್ರಾಮ ಪಂಚಾಯಿತಿಯ ಬೇಡಿಕೆಯ ವಹಿ (ಫಾರ್ಮ್–11) ನಲ್ಲಿ ಅಡ್ಡ ಪರಿಶೀಲನೆ ಮಾಡಲು ಸಾಧ್ಯವಾಗಲಿಲ್ಲ. ಅಮಾನ್ಯಗೊಂಡ ಚೆಕ್ ಗಳ/ಚೆಕ್ ಗಳ ಅಥವಾ ಡ್ರಾಫ್ಟ್‌ಗಳ ನಷ್ಟಗಳಾವುದಾದರೂ ಇದ್ದಲ್ಲಿ, ಅವುಗಳನ್ನು ದಾಖಲಿಸಿರಲಿಲ್ಲ.

2016–17 ರಿಂದ 2019–20 ರವರೆಗಿನ ಆಯಾ ಗ್ರಾಮ ಪಂಚಾಯ್ತಿಗಳ ಬ್ಯಾಂಕ್ ಪಾಸ್ ಶೀಟ್ ಅನ್ನು ಪರಿಶೀಲಿಸಿದಾಗ, ₹48.74 ಲಕ್ಷ ಮೌಲ್ಯದ 47 ಚೆಕ್‌ಗಳನ್ನು ಬ್ಯಾಂಕ್ ಹಿಂತಿರುಗಿಸಿದೆ/ಅಮಾನ್ಯಗೊಳಿಸಿದೆ ಎಂದು ಗಮನಿಸಲಾಗಿದೆ **(ಅನುಬಂಧ–3.4)**, ಇದು ಗ್ರಾಮ ಪಂಚಾಯಿತಿಗಳು (ಗ್ರಾಮ ಪಂಚಾಯ್ತಿ ಬಜೆಟ್ ಮತ್ತು ಲೆಕ್ಕಪತ್ರ) ನಿಯಮಗಳು 2006ರ ಅಡಿಯಲ್ಲಿ ಸೂಚಿಸಲಾದ ಕಾರ್ಯವಿಧಾನಗಳನ್ನು ನಿರ್ವಹಿಸಲಿಲ್ಲ ಎಂದು ಸೂಚಿಸುತ್ತದೆ.

ರಾಜ್ಯ ಸರ್ಕಾರವು ಲೆಕ್ಕಪರಿಶೋಧನೆಯಲ್ಲಿ ಗಮನಿಸಿದ ಅಂಶಗಳು ಒಪ್ಪಿತು.

ಶಿಫಾರಸು: ಕೆಎಸ್‌ಎಡಿಯು ಅಮಾನ್ಯ ಚೆಕ್‌ಗಳಿಗೆ ಸಂಬಂಧಿಸಿದ ವಹಿವಾಟುಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಬೇಕು ಮತ್ತು ಆದಾಯವನ್ನು ಕಾಪಾಡಲು ಕೆಪಿಆರ್ ಗ್ರಾಮ ಪಂಚಾಯಿತಿ (ಬಜೆಟ್ ಮತ್ತು ಲೆಕ್ಕಪತ್ರ) ನಿಯಮಗಳು 2006ರನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಸೂಚಿಸಬೇಕು.

3.6.4 *ಗ್ರಾಮ ಪಂಚಾಯಿತಿ ಆವರಣದಲ್ಲಿ ನಿರ್ಮಿಸಲಾದ ಜಾಹೀರಾತು ಫಲಕಗಳ ಮೇಲಿನ ಬಾಡಿಗೆಯ ಕಡಿಮೆ ಸಂಗ್ರಹ ₹ 4.01 ಲಕ್ಷ*

ತಪಾಸಣಾ ವರದಿಯ ಪರಿಶೀಲನೆ: ಯಮರೆ ಗ್ರಾಮ ಪಂಚಾಯಿತಿಯ ಆವರಣದಲ್ಲಿ ನಿರ್ಮಿಸಲಾದ ಜಾಹೀರಾತು ಫಲಕಗಳ ಬಾಡಿಗೆಯನ್ನು ಸಂಗ್ರಹಿಸದಿರುವ ಬಗ್ಗೆ ಕೆಎಸ್ಎಡಿಯು ತಮ್ಮ ಐಆರ್‌ನಲ್ಲಿ ಯಾವುದೇ ಅಭಿಪ್ರಾಯ ನೀಡಿರಲಿಲ್ಲ.

ಗ್ರಾಮ ಪಂಚಾಯಿತಿ ಸಭೆಯ ನಡವಳಿಗಳು, ಜಾಹೀರಾತು ಸಂಸ್ಥೆಯೊಂದಿಗೆ ಗ್ರಾಮ ಪಂಚಾಯಿತಿ ಮಾಡಿಕೊಂಡ ಒಪ್ಪಂದದ ಪ್ರತಿಗಳ ಮತ್ತು ಪಡೆದ ಬಾಡಿಗೆಯ ವಿಶ್ಲೇಷಣೆಯನ್ನು ಲೆಕ್ಕಪರಿಶೋಧನೆಯು (ಫೆಬ್ರವರಿ 2021) ನೆಡಿಸಿದ್ದ ಗ್ರಾಮ ಪಂಚಾಯಿತಿ ಯಮರೆಯು 2016–17 ಮತ್ತು 2017–18 ವರ್ಷಗಳ ಬಾಡಿಗೆಗೆ ಬಾಕಿ ಇರುವ ₹ 5.16 ಲಕ್ಷಕ್ಕೆ ಬದಲಾಗಿ ಕೇವಲ ₹ 1.15 ಲಕ್ಷವನ್ನು ಮಾತ್ರ 2017–18ರಲ್ಲಿ ಪಡೆದಿರುವುದನ್ನು ಗಮನಿಸಿತು. ವಿವರಗಳನ್ನು **ಕೋಷ್ಟಕ–3.3**ರಲ್ಲಿ ತೋರಿಸಿದೆ.

ಕೋಷ್ಟಕ–3.3: ಜಾಹೀರಾತು ಫಲಕಗಳ ಮೇಲಿನ ಬಾಡಿಗೆಯ ಕಡಿಮೆ ಸಂಗ್ರಹ

(₹ ಗಳಲ್ಲಿ)

ಕ್ರಮ ಸಂಖೆ	ವರ್ಷ	ಜಾಹೀರಾತು ಫಲಕಗಳ ಮೇಲಿನ ಬಾಡಿಗೆಯನ್ನು ಸಂಗ್ರಹಿಸಲಾಗುವುದು	ಜಾಹೀರಾತು ಫಲಕಗಳ ಮೇಲಿನ ಬಾಡಿಗೆಯನ್ನು ವಾಸ್ತವವಾಗಿ ಸಂಗ್ರಹಿಸಲಾಗಿದೆ	ಚಿಕ್ಕದಲ್ಲದ/ಸಂಗ್ರಹ
1	2016–17	2,16,000	0	2,16,000
2	2017–18	3,00,000	1,15,295	1,84,705
	ಒಟ್ಟು	5,16,000	1,15,295	4,00,705

ಆಧಾರ: ಯಮರೆ ಗ್ರಾಮ ಪಂಚಾಯಿತಿಯ ದಾಖಲೆಗಳು

ಇದಲ್ಲದೆ, ಗ್ರಾಮ ಪಂಚಾಯಿತಿಯು ಜಾಹೀರಾತು ಏಜೆನ್ಸಿಯಿಂದ ₹ 4.01 ಲಕ್ಷ ಬಾಡಿಗೆ ವಸೂಲಿಗೆ ನೋಟಿಸ್ ನೀಡಿರಲಿಲ್ಲ ಅಥವಾ ಕ್ರಮ ಕೈಗೊಂಡಿರಲಿಲ್ಲ.

ರಾಜ್ಯ ಸರ್ಕಾರವು ಲೆಕ್ಕಪರಿಶೋಧನಾ ಅಂಶಗಳನ್ನು ಒಪ್ಪಿತು (ಜೂನ್ 2024) ಮತ್ತು ಅಗತ್ಯ ಕ್ರಮ ಕೈಗೊಳ್ಳುವುದಾಗಿ ತಿಳಿಸಿತು.

***ಶಿಫಾರಸು:** ಕೆಎಸ್ಎಡಿಯು ಏಜೆನ್ಸಿಗಳೊಂದಿಗೆ ಅಂತಹ ಎಲ್ಲಾ ಒಪ್ಪಂದಗಳನ್ನು ಪರಿಶೀಲಿಸಬೇಕು ಮತ್ತು ಬಾಕಿಗಳನ್ನು ವಸೂಲಿ ಮಾಡಲು ಕ್ರಮ ಕೈಗೊಳ್ಳಲು ಗ್ರಾಮ ಪಂಚಾಯಿತಿಗಳಿಗೆ ನಿರ್ದೇಶಿಸಬೇಕು.*

3.6.5 ರಶೀದಿ ಪುಸ್ತಕಗಳ ಸಂಗ್ರಹಣೆ ಮತ್ತು ಇತರ ಖರೀದಿಗಳಿಗೆ ಸಂಬಂಧಿಸಿದಂತೆ ತಾಲ್ಲೂಕು ಪಂಚಾಯಿತಿ ಅಧಿಕಾರಿಯು ತನ್ನ ವೈಯಕ್ತಿಕ ಸಾಮರ್ಥ್ಯದಲ್ಲಿ ಗ್ರಾಮ ಪಂಚಾಯಿತಿಗಳಿಂದ ಚೆಕ್‌ಗಳನ್ನು ಅಕ್ರಮವಾಗಿ ಸ್ವೀಕರಿಸುವುದು

ತಪಾಸಣಾ ವರದಿಯ ಪರಿಶೀಲನೆ: ವೋಚರುಗಳಿಲ್ಲದೆ ಚೆಕ್‌ಗಳನ್ನು ಹಸ್ತಾಂತರಿಸುವ ವಿಷಯವನ್ನು ಕೆಎಸ್‌ಎಡಿಯು ತಪಾಸಣಾ ವರದಿಯಲ್ಲಿ ಗಮನಿಸಲಾಗಿಲ್ಲ/ಉಲ್ಲೇಖಿಸಲಾಗಿಲ್ಲ.

ಗ್ರಾಮ ಪಂಚಾಯಿತಿ (ಬಜೆಟ್ ಮತ್ತು ಲೆಕ್ಕಪತ್ರ) ನಿಯಮಗಳು 2006ರ ನಿಯಮ 21ರ ಪ್ರಕಾರ, ಗ್ರಾಮ ಪಂಚಾಯಿತಿಯು ಸರ್ಕಾರಿ ಮುದ್ರಣಾಲಯದಿಂದ ಅಥವಾ ಜಿಲ್ಲಾ ಪಂಚಾಯಿತಿ ಮೂಲಕ ನಮೂನೆ–3 ರಲ್ಲಿ ಮುದ್ರಿತ ರಶೀದಿ ಪುಸ್ತಕಗಳನ್ನು ಪಡೆಯಬೇಕು. ಯಾವುದೇ ಸಂದರ್ಭದಲ್ಲೂ ಖಾಸಗಿ ಮುದ್ರಕರಿಂದ ರಶೀದಿ ಪುಸ್ತಕಗಳನ್ನು ಪಡೆಯಬಾರದು.

ಇದಲ್ಲದೆ, ನಿಯಮ 43ರ ಪ್ರಕಾರ, ಗ್ರಾಮ ಪಂಚಾಯಿತಿ ನಿಧಿಗೆ ಲೆಕ್ಕಹಾಕಲಾಗುವ ಪ್ರತಿಯೊಂದು ಪಾವತಿಯೂ ಸಹ ಬಿಲ್ ಅಥವಾ ರಸೀದಿಯೊಂದಿಗೆ ಬೆಂಬಲಿತವಾಗಬೇಕು ಹಾಗೂ ನಿರ್ದಿಷ್ಟ ಮೊತ್ತವನ್ನು ಪಾವತಿಸಲು ಆದೇಶವನ್ನು ಹೊಂದಿರಬೇಕು ಮತ್ತು ನಿಯಮ 46 (2)ರ ಪ್ರಕಾರ, ರಶೀದಿಯನ್ನು ಯಾರಿಗಾಗಿ ಅಥವಾ ಯಾರ ಪರವಾಗಿ ಕ್ಲೈಮ್ ಅನ್ನು ಮಂಡಿಸಲಾಗಿದೆಯೋ ಅವರು ಸಹಿ ಮಾಡಿದ ಪಾವತಿಯ ಅಂಗೀಕಾರವನ್ನು ಹೊಂದಿರಬೇಕು ಅಥವಾ ಲಗತ್ತಿಸಿರಬೇಕು.

ಶಾಂತಿಪುರ ಗ್ರಾಮ ಪಂಚಾಯಿತಿ ಮತ್ತು ಮುಗಳೂರು ಗ್ರಾಮ ಪಂಚಾಯಿತಿಗಳಲ್ಲಿ 2017–18 ಮತ್ತು 2018–19ನೇ ಸಾಲಿಗೆ ಸಂಬಂಧಿಸಿದ ನಗದು ಪುಸ್ತಕ, ಉಳಿತಾಯ ಬ್ಯಾಂಕ್ ಖಾತೆಗಳ ಪಾಸ್ ಶೀಟ್‌ಗಳನ್ನು ಪರಿಶೀಲಿಸಿದಾಗ (ಮಾರ್ಚ್ 2021), ಗ್ರಾಮ ಪಂಚಾಯಿತಿಗಳು ಆನೇಕಲ್ ತಾಲ್ಲೂಕು ಪಂಚಾಯಿತಿಯ ಪ್ರಥಮ ದರ್ಜೆ ಸಹಾಯಕರಾದ ಶ್ರೀ ಟಿ.ವಿ. ಮೂರ್ತಿ, ಅವರ ಹೆಸರಿನಲ್ಲಿ ನಾಲ್ಕು ಚೆಕ್‌ಗಳನ್ನು ನೀಡಿರುವುದು ಗಮನಿಸಿದ್ದು, ಇದನ್ನು **ಕೋಷ್ಟಕ–3.4**ರಲ್ಲಿ ವಿವರಿಸಲಾಗಿದೆ.

ಕೋಷ್ಟಕ–3.4: ನಿಯಮಗಳನ್ನು ಉಲಂಘಿಸಿ ಚೆಕ್‌ಗಳ ವಿತರಿಸಿದ ವಿವರಗಳು

ಕ್ರಮ ಸಂಖ್ಯೆ	ವಿಷಯ	ಗ್ರಾಮ ಪಂಚಾಯಿತಿ ಹೆಸರುಗಳು	ಚೆಕ್. ಸಂಖ್ಯೆ / ದಿನಾಂಕ	ಮೊತ್ತ (₹ ನಲ್ಲಿ)
1	ರಶೀದಿ ಪುಸ್ತಕಗಳ ಖರೀದಿ	ಶಾಂತಿಪುರ	718615/01–01–2019	8,000
2	ರಶೀದಿ ಪುಸ್ತಕಗಳ ಖರೀದಿ	ಮುಗಳೂರು	745134/26–04–2017	10,000
			ಉಪ ಮೊತ್ತ	18,000
3	ವಿಶ್ವ ಪರಿಸರ ದಿನಾಚರಣೆಗಾಗಿ ಟಿ–ಶರ್ಟ್‌ಗಳ ಖರೀದಿ	ಮುಗಳೂರು	367060/27–06–2018	6,500
4	ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ ಪುಸ್ತಕ	ಮುಗಳೂರು	291756/05–09–2018	18,400
			ಉಪ ಮೊತ್ತ	24,900
			ಒಟ್ಟು ಮೊತ್ತ	42,900

ಆಧಾರ: ಗ್ರಾಮ ಪಂಚಾಯಿತಿಗಳ ದಾಖಲೆಗಳು

ಬೆಂಗಳೂರಿನ ಗಾಂಧಿನಗರದಲ್ಲಿರುವ ಕರ್ನಾಟಕ ಲಾ ಜರ್ನಲ್ ಪಬ್ಲಿಕೇಷನ್‌ನಿಂದ ಮೇಲೆ ತಿಳಿಸಿದ ಖರೀದಿಗಳನ್ನು ಗ್ರಾಮ ಪಂಚಾಯಿತಿಗಳು ಮಾಡಿದ್ದರೂ, ಸಂಬಂಧಪಟ್ಟ ಪೂರೈಕೆದಾರರ ಖಾತೆಗೆ

ಮೊತ್ತವನ್ನು ವರ್ಗಾಯಿಸುವ ಬದಲು, ಆನೇಕಲ್ ತಾಲ್ಲೂಕು ಪಂಚಾಯತಿಯ ಪ್ರಥಮ ದರ್ಜೆ ಸಹಾಯಕ ಶ್ರೀ ಟಿ.ವಿ. ಮೂರ್ತಿ ಅವರ ಹೆಸರಿನಲ್ಲಿ ಚೆಕ್‌ಗಳನ್ನು ನೀಡಿದರು.

ತಾಲ್ಲೂಕು ಪಂಚಾಯಿತಿ ಅಧಿಕಾರಿಯ ಹೆಸರಿನಲ್ಲಿ ಚೆಕ್‌ಗಳನ್ನು ನೀಡಿದ್ದಕ್ಕೆ ದಾಖಲೆಗಳಿಂದ ಕಾರಣಗಳು ಕಂಡುಬಂದಿರಲಿಲ್ಲ, ಇದು ಮೇಲಿನ ನಿಯಮಗಳಿಗೆ ವಿರುದ್ಧವಾಗಿದ್ದು ಸರ್ಕಾರಿ ಹಣದ ದುರುಪಯೋಗವನ್ನು ತಳ್ಳಿಹಾಕುವಂತಿಲ್ಲ.

ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ರಾಜ್ಯ ಸರ್ಕಾರವು ಉತ್ತರಿಸಿತು (ಏಪ್ರಿಲ್ 2024).

ಶಿಫಾರಸು: ಕೆವಿಎಸ್‌ಎಡಿಯು ಸಾಮಾನ್ಯ ರಶೀದಿ ಪುಸ್ತಕಗಳು ಮತ್ತು ಇತರ ಸಾದಿಲ್ವಾರು ಬಿಲ್‌ಗಳ ಖರೀದಿ ಕಾರ್ಯವಿಧಾನಗಳನ್ನು ಕೆಪಿಆರ್ ಗ್ರಾಮ ಪಂಚಾಯತಿ (ಬಜೆಟ್ ಮತ್ತು ಲೆಕ್ಕಪತ್ರ) ನಿಯಮ–2006ರ ಪ್ರಕಾರ ಪರಿಶೀಲಿಸಬೇಕು.

3.6.6 ಭೂ ಉತ್ಖನನದ ಕಾಮಗಾರಿಯನ್ನು ಯಾಂತ್ರಿಕ ವಿಧಾನದ ಬದಲು ಮಾನವಕೈದುಡಿತ ವಿಧಾನದಿಂದ ಮಾಡಿದೆ ಎಂಬ ಅಸಮರ್ಪಕ ಪ್ರಮಾಣೀಕರಣವು ಗುತ್ತಿಗೆದಾರರಿಗೆ ₹ 13.06 ಲಕ್ಷ ಹೆಚ್ಚುವರಿ ಮೊತ್ತವನ್ನು ಪಾವತಿಸಲು ಅನುಕೂಲ ಮಾಡಿಕೊಟ್ಟಿತು

ತಪಾಸಣಾ ವರದಿಯ ಪರಿಶೀಲನೆ: ತುಮರಿ ಗ್ರಾಮ ಪಂಚಾಯಿತಿಯಲ್ಲಿ ಭೂ ಉತ್ಖನನ ಕಾಮಗಾರಿಯಲ್ಲಿ ಗುತ್ತಿಗೆದಾರರಿಗೆ ಪಾವತಿಸಿದ ಹೆಚ್ಚುವರಿ ಮೊತ್ತದ ಬಗ್ಗೆ ಕೆವಿಎಸ್‌ಎಡಿಯು ತಮ್ಮ ಐಆರ್‌ನಲ್ಲಿ ಯಾವುದೇ ಅಭಿಪ್ರಾಯವನ್ನು ನೀಡಿಲ್ಲ.

ಕರ್ನಾಟಕ ಲೋಕೋಪಯೋಗಿ ಸಂಹಿತೆಯ ನಿಯಮ 34(8)ರ ಪ್ರಕಾರ, ಕ್ಷೇತ್ರ ಅಭಿಯಂತರರು ಅವರಿಗೆ ವಹಿಸಲಾದ ಕಾಮಾಗಾರಿಗಳನ್ನು ನಿರ್ಮಾಣದ ಎಲ್ಲಾ ಹಂತಗಳಲ್ಲಿ ಅಗತ್ಯವಿರುವ ಗುಣಮಟ್ಟದೊಂದಿಗೆ ನಿರ್ದಿಷ್ಟ ಅನುಮೋದಿತ ನಮೂನೆಗಳು ಮತ್ತು ಅಂದಾಜುಗಳ ಪ್ರಕಾರ ಕೈಗೊಳ್ಳಲಾಗಿದೆಯೇ ಹಾಗೂ ಸಮಯೋಚಿತವಾಗಿ ಮತ್ತು ಪರಿಣಾಮಕಾರಿಯಾಗಿ ನಿರ್ವಹಿಸಲಾಗಿದೆ ಎಂದು ಖಚಿತಪಡಿಸಿಕೊಳ್ಳಬೇಕು.

2016–17 ರಿಂದ 2020–21ರ ಅವಧಿಯಲ್ಲಿ ರಸ್ತೆ ಅಭಿವೃದ್ಧಿ, ರಸ್ತೆ ಸುಧಾರಣೆ ಮತ್ತು ರಸ್ತೆಗೆ ಎನ್.ಪಿ 2 ಪೈಪ್‌ಗಳನ್ನು ಅಳವಡಿಸುವ ಬಗ್ಗೆ ಗ್ರಾಮ ಪಂಚಾಯಿತಿ, ತುಮರಿಯು ಕಾರ್ಯಗತಗೊಳಿಸಿದ 86 ಕಾಮಗಾರಿಗಳ ಪರಿಶೀಲನೆಯಲ್ಲಿ, ಈ ಕೆಳಗಿನ ಅಂಶಗಳನ್ನು ಗಮನಿಸಲಾಗಿತ್ತು.

(1) ಮಾನವ ಕೈದುಡಿತದಿಂದ ಭೂ ಊತ್ಖನನ ಮತ್ತು 50 ಮೀಟರ್ ವರೆಗೆ ಸಾಗಾಣಿಕೆ – ತಾಂತ್ರಿಕ ವಿಶೇಷಣ ಷರತ್ತು 302.3 ಪ್ರಕಾರ (ಐಟಂ ಸಂಖ್ಯೆ 3.5(i)) ಮಾನವ ಕೈದುಡಿತದಿಂದ ರಸ್ತೆಗಾಗಿ ಭೂ ಊತ್ಖನನ ಮತ್ತು ಅಗೆದ ಮಣ್ಣನ್ನು ಅಚ್ಚುಕಟ್ಟು ಸ್ಥಳಕ್ಕೆ 1.5 ಮೀಟರ್ ವರೆಗೆ ಎತ್ತುವಿಕೆ ಹಾಗೂ 50 ಮೀಟರ್ ವರೆಗೆ ಸಾಗಣೆ ಎಂಬ ಅಂಶವನ್ನು ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ದರಪಟ್ಟಿ ಅಳವಡಿಸಿಕೊಂಡು ಅಂದಾಜುಗಳನ್ನು ತಯಾರಿಸಲಾಯಿತು.

(2) ಅಂತಿಮ ಕೆಲಸದ ಬಿಲ್‌ಗಳೊಂದಿಗೆ ಲಗತ್ತಿಸಲಾದ, ಕಾಮಗಾರಿಯನ್ನು ಕಾರ್ಯಗತಗೊಳಿಸುವಾಗ ತೆಗೆದ ಛಾಯಾಚಿತ್ರಗಳಿಂದ ಇದನ್ನು ವಾಸ್ತವವಾಗಿ ಯಾಂತ್ರಿಕ ವಿಧಾನಗಳಿಂದ ಕಾರ್ಯಗತಗೊಳಿಸಲಾಗಿದೆ ಎಂದು ಕಂಡುಬಂದಿದೆ, ಇದು ಮಾನವ ಕೈದುಡಿತದ ಮೂಲಕ ಮಾಡಿದ ವಿಧಾನಗಳಿಗೆ ಹೋಲಿಸಿದರೆ ಕಡಿಮೆ ದರಗಳನ್ನು ಹೊಂದಿದೆ.

(3) ಆದಾಗ್ಯೂ, ಮೇಲಿನ ಕಾಮಗಾರಿಯನ್ನು ಮಾನವ ಕೈದುಡಿತದ ಮೂಲಕ ನಡೆಸಲಾಗಿದೆ ಎಂದು ಸಂಬಂಧಪಟ್ಟ ಅಭಿಯಂತರರು ಮಾಪನ ಪುಸ್ತಕಗಳು ಮತ್ತು ಅಂತಿಮ ಆರ್.ಎ ಬಿಲ್‌ಗಳಲ್ಲಿ ಪ್ರಮಾಣೀಕರಿಸಿದ್ದಾರೆ.

(4) ಅದರಂತೆ, ಗುತ್ತಿಗೆದಾರರು ಮಾನವ ಕೈದುಡಿತ ಮಾಡಿದಂತೆ ಬಿಲ್ ಅನ್ನು ಕ್ಲೈಮ್ ಮಾಡಿದ್ದು ಅದು ಯಾಂತ್ರಿಕ ವಿಧಾನಕ್ಕಿಂತ ಹೆಚ್ಚಾಗಿದೆ. ಬಿಲ್ಲನ್ನು ಯಾಂತ್ರಿಕ ವಿಧಾನಗಳ ದರಕ್ಕೆ ಮಿತಿಗೊಳಿಸುವಲ್ಲಿ ಗ್ರಾಮ ಪಂಚಾಯಿತಿಯು ವಿಫಲವಾದ ಕಾರಣ, **ಅನುಬಂಧ–3.5**ರಲ್ಲಿ ವಿವರಿಸಿದಂತೆ ಗುತ್ತಿಗೆದಾರರಿಗೆ ₹ 13.06 ಲಕ್ಷ ಹೆಚ್ಚುವರಿ ಪಾವತಿಯಾಗಿದೆ.

ರಾಜ್ಯ ಸರ್ಕಾರವು ಲೆಕ್ಕಪರಿಶೋಧನೆಯ ಅಂಶಗಳನ್ನು ಒಪ್ಪಿ ಅಗತ್ಯ ಕ್ರಮ ಕೈಗೊಳ್ಳುವುದಾಗಿ ತಿಳಿಸಿತು (ಜೂನ್ 2024).

ಬೆಂಗಳೂರು

ದಿನಾಂಕ 11 AUG 2025

(ವಿಮಲೇಂದ್ರ ಆನಂದ್ ಪಟವರ್ಧನ್)

ಪ್ರಧಾನ ಮಹಾಲೇಖಾಪಾಲರು(ಲೆಕ್ಕಪರಿಶೋಧನೆ–I)

ಕರ್ನಾಟಕ